ಸಬ್‌ರಿಜಿಸ್ಟ್ರಾರ್‌ರ ಆಫೀಸಿನಲ್ಲಿ ವ್ಯವಹರಿಸುವ ಕುರಿತು

695 - ಪಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸಬ್‌ರಿಜಿಸ್ಟ್ರಾರ್‌ರ ಆಫೀಸಿನಲ್ಲಿ ವ್ಯವಹರಿಸುವಾಗ ಬರವಣಿಗೆಗಾರರ (ಡಾಕ್ಯೂಮೆಂಟ್ ರೈಟರ್ಸ್) ಮೂಲಕ ವ್ಯವಹರಿಸಬೇಕಾಗಿರುವುದು ಕಡ್ಡಾಯವಾಗಿದೆಯೇ?*

ಆ) *ಕಡ್ಡಾಯವಾಗಿದ್ದರೆ ಈ ರೀತಿಯ ಬರವಣಿಗಾರರಿಗೆ ಇರಬೇಕಾದ ಅರ್ಹತೆಗಳೇನು?*

ಇ) *ಇವರಿಗೆ ಅಧಿಕೃತ ಪರವಾನಗಿ ಬೇಕಾಗಿದೆಯೇ, ಹಾಗಿದ್ದಲ್ಲಿ, ಪರವಾನಗಿ ನೀಡುವ ಅಧಿಕಾರಿ ಯಾರು?*

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು, ಬರವಣಿಗಾರರಾಗಲು ಅಧಿಕೃತ ಪರವಾನಿಗೆ ಬೇಕು. ಇವುಗಳನ್ನು ಜಿಲ್ಲಾ ನೋಂದಣಾಧಿಕಾರಿಗಳು ನೀಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೃಹ ಮಂಡಲಿಯ ಗೃಹಗಳು

786 - ಶ್ರೀ ಬಸವರಾಜ್(ಬ್ರಹ್ಮಾವರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹಮಂಡಳಿಯಿಂದ ಈವರೆಗೆ ನಿರ್ಮಾಣವಾಗಿರುವ ಗೃಹಗಳು ಎಷ್ಟು? (ವಿವಿಧ ರೀತಿಯ ಗೃಹಗಳ ವಿವರ ಮತ್ತು ಗೃಹಗಳು ಇರುವ ಸ್ಥಳದೊಂದಿಗೆ ತಾಲ್ಲೂಕುವಾರು ವಿವರ ನೀಡುವುದು?*

ಆ) *ಈವರೆಗೆ ಸಾರ್ವಜನಿಕರಿಗೆ ಹಂಚಲ್ಪಟ್ಟಿರುವ ಗೃಹಗಳ ಒಟ್ಟು ಸಂಖ್ಯೆ ಎಷ್ಟು? ಹಾಗೂ ಎಷ್ಟು ಗೃಹಗಳು ಎಷ್ಟು ಸಮಯದಿಂದ ಹಂಚಿಕೆಯಾಗಲು ಬಾಕಿ ಉಳಿದಿದೆ? ಹಂಚಿಕೆಯಾಗದೆ ಉಳಿದಿರಲು ಕಾರಣ ಏನು?*

ಇ) *ಗೃಹ ಮಂಡಳಿ ಗೃಹಗಳನ್ನು ಕೋರಿ ಸಾರ್ವಜನಿಕರಿಂದ ಎಷ್ಟು ಅರ್ಜಿಗಳು ಬಂದಿವೆ? ಈಗ ನಿರ್ಮಾಣ ಹಂತದಲ್ಲಿರುವ ಗೃಹಗಳ ಒಟ್ಟು ಸಂಖ್ಯೆ ಎಷ್ಟು (ವಿವಿಧ ರೀತಿಯ ಗೃಹಗಳ ಹೆಸರಿನೊಂದಿಗೆ ತಾಲ್ಲೂಕುವಾರು ವಿವರ ಪ್ರತ್ಯೇಕವಾಗಿ ನೀಡುವುದು)*

ಈ) *ಇತ್ತೀಚೆಗೆ ನಿರ್ಮಾಣಗೊಂಡ ಗೃಹಗಳು ಕಳಪೆ ಕಾಮಗಾರಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 1526 (ವಿವಿಧ ರೀತಿಯ ಮತ್ತು ಸ್ಥಳವಾರು ಮಾಹಿತಿ ಲಗತ್ತಿಸಲಾಗಿದೆ.)

ಆ) ಹಂಚಿಕೆಯಾಗಿರುವ ಮನೆಗಳ ಸಂಖ್ಯೆ 1397 ಹಂಚಿಕೆಯಾಗದೆ ಇರುವ ಮನೆಗಳ ಸಂಖ್ಯೆ 129 ಬೇಡಿಕೆ ಕಡಿಮೆ ಇರುವುದರಿಂದ ಹಂಚಲಾಗಿಲ್ಲ.

ಇ) ಹಾಲಿ 115 ಅರ್ಜಿಗಳು ಬಂದಿವೆ. ಸದ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಸ್ಥಳಗಳಲ್ಲಿ ಮಾತ್ರ 153 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕಾರ್ಕಳದಲ್ಲಿ 138 ಮನೆಗಳು (ಮಧ್ಯಮ ಆದಾಯ ವರ್ಗ-80, ಕಡಿಮೆ ಆದಾಯ ವರ್ಗ-58) ಮತ್ತು ಮುಲ್ಕಿಯಲ್ಲಿ 15 ಮನೆಗಳು (ಮಧ್ಯಮ ಆದಾಯ ವರ್ಗ-5, ಆರ್ಥಿಕ ದುರ್ಬಲ ವರ್ಗ-10)

ಈ) ಇಲ್ಲ.

ಅನುಬಂಧ-೧

ಕರ್ನಾಟಕ ಗೃಹ ಮಂಡಳಿಯು ಸ್ಥಾಪನೆಯಾದಂದಿನಿಂದ **31-1-1991** ರವರೆವಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಸ್ಥಳಗಳಲ್ಲಿ ವಿವಿಧ ವರ್ಗಗಳ ಅಡಿಯಲ್ಲಿ ಕಟ್ಟಿರುವ ಮನೆಗಳ ವಿವರ :

ಕ್ರಮ ಸಂಖ್ಯೆ	ಕಟ್ಟಿರುವ ಸ್ಥಳಗಳು	ವಿವಿಧ ವರ್ಗಗಳು						
		ಎಸ್‌ಆರ್‌ಹೆಚ್ ಎಸ್	ಆರ್‌ಹೆಚ್ ಎಸ್	ಎಲ್‌ಐಜಿ	ಎಂಐಜಿ	ಎಎಸ್‌ಎಂ	ಎಂಓ	ಮೊತ್ತ
1.	ಮರ್ಕಡಾ	-	190	94	33	-	-	317
2.	ದೊಡ್ಡನಗುಡ್ಡೆ, ಉಡುಪಿ	48	24	160	94	-	-	326
3.	ಶಿವಳ್ಳಿ, ಮಣಿಪಾಲ	-	-	84	129	-	-	213
4.	ಕುಂಜತ್‌ಬೈಲ್	-	-	54	70	-	-	124
5.	ಮೂಡಬಿದರೆ	-	23	181	30	-	-	234
6.	ಸೂಳ್ಯ	-	-	27	-	-	-	27
7.	ಪುತ್ತೂರು	10	10	36	6	-	-	62
8.	ಪಡೆವು ಮಂಗಳೂರು	96	-	35	23	-	-	154
9.	ಕಾರ್ಕಳ	5	-	5	-	2	1	13
10.	ಶಿವತಾಡಿ	-	-	-	-	2	-	2
11.	ಮುಲ್ಕಿ	-	-	10	8	-	-	18
12.	ಕುಂಬಾಸಿ	-	-	10	10	-	-	20
13.	ಬೆಳ್ತಂಗಡಿ	-	-	16	-	-	-	16
		159	247	712	403	4	1	1526